13 ಬಿಜಾಪುರ ಜಿಲ್ಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಚಾಲಕರ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಪಕ್ಷ ಪಾತ ವೆಸಗಿರುವುದು.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ವಾಹನ ಚಾಲಕರ ಹುದ್ದೆಗಳನ್ನು ತುಂಬಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಅರ್ಜಿಗಳನ್ನು ಕರೆದಿದ್ದು, ಆಯ್ಕೆ ಮಾಡುವ ಬಗ್ಗೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗಿತ್ತು. ಈ ಸಂಬಂಧದಲ್ಲಿ ಸಂದರ್ಶನ ನಡೆಸುವುದಕ್ಕಾಗಿ ಜಿಲ್ಲಾ ಮೆಕ್ಯಾನಿಕಲ್ ಇಂಜಿನಿಯರು ಗಳನ್ನು ಕಳುಹಿಸಲಾಗಿದಿ ತು. ಇವರುಗಳು ಸಂದರ್ಶನ ಹಾಗೂ ಟೆಸ್ಟ್ ನಡೆಸಿ ಅಭ್ಯರ್ಥಿಗಳನ್ನು ಆರಿಸಿ ಒಂದು ಪಟ್ಟಿಯನ್ನು ತಯಾರಿಸಿದ್ದರು. ಆದರೆ, ಈ ಪಟ್ಟಿಯಲ್ಲಿ ಅವರಿಗೆ ಬೇಕಾದವರನ್ನೇ ಆರಿಸುವ ಮೂಲಕ ಸ್ವಜನ ಪಕ್ಷಪಾತ ತೋರಿಸಲಾಗಿದ್ದಿತೆಂದು ತಿಳಿದು ಬಂದಿದೆ. ಈ ಪಟ್ಟಿಯನ್ನು ರದ್ದು ಮಾಡಿ ಮತ್ತೊಂದು ಬಾರಿ ಸಂದರ್ಶನ ನಡೆಸಿ ಪಟ್ಟಿ ತಯಾರಿಸುವುದಾಗಿಯೂ ತಿಳಿದು ಬಂದಿದೆ. ಮೊದಲು ತಯಾರಿಸಿದ ಪಟ್ಟಿಯನ್ನು ರದ್ದು ಮಾಡಿದುದಕ್ಕೆ ಕಾರಣವೇನು ಹಾಗೂ ಸಂದರ್ಶನ ನಡೆಸಿದವರಾರು ಮತ್ತು ಎರಡನೇ ಭಾರಿ ಸಂದರ್ಶನ ನಡೆಸಿದವರಾರು. ಎರಡನೇ ಪಟ್ಟಿಯ ಬಗ್ಗೆಯೂ ಬಿಜಾಪುರದ ನಾಗರೀಕರು ಸಂಘರ್ಷ ಸಮಿತಿ ಯವರು ಬಿಜಾಪುರದ ಗಾಂಧಿಚೌಕದಲ್ಲಿ ೫.೪.೮೮ ರಿಂದಲೂ ಸರದಿ ಉಪವಾಸ ಸತ್ಯಾಗ್ರಹ ನಡೆಸಿದ್ದು ಇತ್ತೀಚೆಗೆ ಅಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ಯಾವುದೇ ಅನಾಹುತ ಸಂಭವಿಸುವ ಮುನ್ನ ಸರ್ಕಾರದವರು ಮಧ್ಯ ಪ್ರವೇಶಿಸಿ ಸದರಿ ಸಂದರ್ಶನದ ಬಗ್ಗೆ ಕೂಲಂಕುಷ ತನಿಖೆ ನಡೆಸುವುದಲ್ಲದೆ, ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸುವುದನ್ನು ಕೂಡಲೇ ನಿಲ್ಲಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಪ್ರಕರಣವನ್ನು ಸಿ.ಒ.ಡಿ.ಗೆ. ತನಿಖೆಗಾಗಿ ಒಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಸ್ತಾದ್‌ರವರು ಕಿಕಿಳಿರ ಮೇರೆಗೆ ಎತ್ತಿದ ವಿಷಯಕ್ಕೆ ಮಾನ್ಯ ಸಾರಿಗೆ ಸಚಿವರು ನನಗೆ ಉತ್ತರವನ್ನು ಹೇಳಿದ್ದಾರೆ ನಾನು ಬಾಯಿಯಲ್ಲಿ ಉತ್ತರವನ್ನು ಹೇಳುವುದಕ್ಕೆ ಸಿದ್ಧನಿದ್ದೇನೆ. ಒಂದು ವೇಳೆ ಅವರಿಗೆ ಬರವಣಿಗೆಯಲ್ಲಿ ಉತ್ತರವು ಬೇಕಾದರೆ ನಾಳೆ ತರಿಸಿಕೊಡುತ್ತೇನೆ. ಮಾನ್ಯರು ಹೇಳಿದ ಪ್ರಕರಣದ ಬಗ್ಗೆ ವಿಚಾರಣೆ ಮಾಡಿಸುತ್ತೇವೆ. ವಿಚಾರಣೆ ಮಾಡಿಸಿ, ಏನಾದರೂ ತಪ್ಪುಗಳು ಕಂಡು ಬಂದರೆ, ಆ ತಪ್ಪನ್ನು ಮಾಡಿದವರ ಮೇಲೆ ಸೂಕ್ತ ಕಾನೂನಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ ಆ ಬಗ್ಗೆ ನಾವೇ ವಿಚಾರಣೆ ಮಾಡಿ ಸುತ್ತೇವೆ ಎಂದು ಹೇಳಿದ ಮೇಲೆ ಅದನ್ನು ಸಿ. ಓ. ಡಿ. ಗೆ ಕೊಡಬೇಕಾದ ಅವಶ್ಯಕತೆ ಇಲ್ಲ. ಅಮರಣ ಉಪವಾಸ ನಡೆಸುತ್ತಿರುವವರು ಅದನ್ನು ನಿಲ್ಲಿಸಬೇಕು. ಈ ಬಗ್ಗೆ ಮಾನ್ಯ ಉಸ್ತಾದ್‌ರವರು, ಸಾರಿಗೆ ಮಂತ್ರಿಯವರು ಮತ್ತು ನಾನೂ ಕೂಡ ಸೇರಿ ಅವರ ಅಮರಣ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಕೇಳಿ ಕೊಳ್ಳೋಣ. ಇದರ ಬಗ್ಗೆ ತನಿಖೆ ಮಾಡುತ್ತೇವೆ. ತಪ್ಪಿತಸ್ಥರ ಮೇಲೆ ತೆಗೆದುಕೊಳ್ಳುತ್ತೇವೆ. ಈ ಒಂದು ಸರಕಾರದ ಭರವಸೆಯ ಮೇಲೆ ಅವರು ತತ್‌ಕ್ಷಣ ಉಪವಾಸವನ್ನು ನಿಲ್ಲಿಸಬೇಕೆಂದು ಸರಕಾರದ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಆ ಕುರಿತು ಮಾನ್ಯ ಉಸ್ತಾದ್‌ರವರು ತಮ್ಮ ಪ್ರಭಾವವನ್ನು ಅವರ ಮೇಲೆ ಬೀರಿ. ಅವರು ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವಲ್ಲಿ ತಮ್ಮ ಉಸ್ತಾದ್‌ಗಿರಿಯನ್ನು ಸ್ಥಾಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

೧೪) ಸಾರಿಕೆ ಸಂಸ್ಥೆಯ ಬಸ್ಸು ಪುತ್ತೂರಿನ ಕಂಬಳ ಎಂಬಲ್ಲಿ ಅತೀ ವೇಗದಿಂದ ಚಲಿಸಿದ್ದ ಪರಿಣಾಮವಾಗಿ ಬಸ್ಸು ಮಂಗುಚಿ ೧೫ ಜನರಿಗೆ ತುಂಬಾ ಪೆಟ್ಟಾಗಿರುವುದು

ಶ್ರೀ ವಿನಯಕುಮಾರ್ ಸೊರಕೆ.—ಇದೇ ಮೇ ತಿಂಗಳ ೨೯ ನೇ ತಾರೀಖು ಮಧ್ಯಾಹ್ನ ಪುತ್ತೂರಿನ ಬಳಿ ಕುಂಬ್ರ ಎಂಬಲ್ಲಿ ಒಂದು ಬಸ್ ಅಪಘಾತ ಆಗಿದೆ ಅಂದು ಮಂಗಳೂರಿನಿಂದ ಮದರಾಸಿಗೆ ಹೋಗುತ್ತಿದ್ದ ತಮಿಳುನಾಡಿನ ಬಸ್ಸು–ಮಡಿಕೇರಿ ಮೂಲಕ ಪಯಣಿಸಬೇಕಾಗಿದ್ದು ತಾ: ೨೯ ರಂದು ವಿಪರೀತ ವೇಗದಿಂದ ಸಾಗುತ್ತಿದ್ದುದನ್ನು ಕಂಡು ಜನರಿಗೆಲ್ಲ ಆಶ್ಚರ್ಯ–ಸರಕಾರದವರೇನಾದರೂ ವೇಗ ಸಂಚಾರದ ಸ್ಪರ್ಧೆ ಏರ್ಪಾಡಿಸಿದ್ದಾರೋ ಹೇಗೆ, ಎಂದು ಸಂಶಯ. ಈ ವೇಗದ ಪರಿಣಾಮ